# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 318 |
| ಸದಸ್ಯರ ಹೆಸರು | : | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ |
| ಉತ್ತರಿಸುವ ದಿನಾಂಕ | : | 07-07-2023 |
| ಉತ್ತರಿಸುವ ಸಚಿವರು | : | ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು, ಮೈಸೂರು, ಚಾಮರಾಜನಗರ ಮುಂತಾದ ಜಿಲ್ಲೆಗಳಲ್ಲಿ ಗುಡಿಸಲುಗಳಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನಾಂಗದವರಿಗೆ ಮುಂಬರುವ ಮಳೆಗಾಲದಲ್ಲಿ ಸುರಕ್ಷತೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು) | ಕೊಡಗು, ಮೈಸೂರು ಮತ್ತು ಚಾಮರಾಜನಗರ ಮುಂತಾದ ಜಿಲ್ಲೆಗಳಲ್ಲಿ ವಾಸಿಸುವ ಪರಿಶಿಷ್ಟ ಪಂಗಡದ ನೈಜ ದುರ್ಬಲ ಬುಡಕಟ್ಟು ಸಮುದಾಯಗಳಾದ ಜೇನು ಕುರುಬ ಮತ್ತು ಕೊರಗ ಸಮುದಾಯದವರ 2849 ಮನೆಗಳನ್ನು ಘಟಕ ವೆಚ್ಚ ರೂ.3.75 ಲಕ್ಷಗಳಂತೆ ನಿರ್ಮಾಣ ಮಾಡಿಕೊಳ್ಳಲು ಫಲಾನುಭವಿಗಳಿಗೆ ಸಹಾಯಧನ ಬಿಡುಗಡೆ ಮಾಡಲಾಗುತ್ತಿದೆ. |

| ಕ್ರ. ಸಂ | ಜಿಲ್ಲೆ | ಭೌತಿಕ ಗುರಿ | ಅನುಮೋದನೆಗೊಂಡ ಮನೆಗಳು | ಪೂರ್ಣಗೊಂಡ ಮನೆಗಳು | ಪ್ರಗತಿಯಲ್ಲಿರುವ ಮನೆಗಳು. | ಬಾಕಿ ಭೌತಿಕ ಗುರಿ |
|---|---|---|---|---|---|---|
| 01 | ಉಡುಪಿ | 325 | 308 | 10 | 300 | 17 |
| 02 | ದಕ್ಷಿಣ ಕನ್ನಡ | 112 | 63 | 00 | 63 | 49 |
| 03 | ಚಾಮರಾಜನಗರ | 75 | 75 | 00 | 75 | 0 |
| 04 | ಕೊಡಗು | 601 | 469 | 03 | 467 | 132 |
| 05 | ಮೈಸೂರು | 1735 | 1732 | 39 | 1709 | 3 |
| 06 | ಶಿವಮೊಗ್ಗ | 01 | 01 | 0 | 1 | 0 |
| | **ಒಟ್ಟು** | **2849** | **2648** | **52** | **2615** | **201** |

2023-24ನೇ ಸಾಲಿನಲ್ಲಿ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯವು ನೈಜ ದುರ್ಬಲ ಬುಡಕಟ್ಟು

| | | |
|---|---|---|
| | | ಸಮುದಾಯಗಳಾದ ಜೇನುಕುರುಬ ಮತ್ತು ಕೊರಗ ಸಮುದಾಯದವರ 1598 ಮನೆಗಳನ್ನು ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದ್ದು, ಈ ಸಂಬಂಧ ರಾಜ್ಯ ಸರ್ಕಾರವು ಘಟಕ ವೆಚ್ಚದ ವ್ಯತ್ಯಾಸದ ಮೊತ್ತ ರೂ.1767.50 ಲಕ್ಷಗಳನ್ನು ಭರಿಸಲು ವಸತಿ ಇಲಾಖೆಯ ಪರಿಶಿಷ್ಟ ಪಂಗಡದ ಉಪಯೋಜನೆ ಕ್ರಿಯಾಯೋಜನೆ ರೂಪಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ.<br><br>ರಾಜ್ಯದ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಮೈಸೂರು, ಉತ್ತರ ಕನ್ನಡ, ಚಾಮರಾಜನಗರ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ವಾಸಿಸುವ ಮೂಲನಿವಾಸಿ ಪಂಗಡದವರಾದ ಕೊರಗ ಮತ್ತು ಜೇನುಕುರುಬ ಹಾಗೂ ಇತರೆ ಪರಿಶಿಷ್ಟ ಪಂಗಡದವರಾದ ಕಾಡುಕುರುಬ, ಸೋಲಿಗ, ಯರವ, ಮಲೆಕುಡಿಯ, ಕುಡಿಯ, ಸಿದ್ದಿ, ಗೌಡಲು, ಗೊಂಡ ಮತ್ತು ಹಸಲರು ಜನಾಂಗದವರು ಅರಣ್ಯ ಮತ್ತು ಅರಣ್ಯದ ಅಂಚಿನಲ್ಲಿ ವಾಸಿಸುತ್ತಿದ್ದು, ಅವರಿಗೆ ಮಳೆಗಾಲದಲ್ಲಿ ಜೀವನ ನಿರ್ವಹಣೆಗೆ ತೊಂದರೆಯಾಗಿ, ಅಪೌಷ್ಠಿಕತೆಯಿಂದ ಬಳಲುವುದನ್ನು ತಪ್ಪಿಸಲು 45 ದಿನಗಳಿಗೊಮ್ಮೆ ವಾರ್ಷಿಕ ಆರು ಬಾರಿ ಪ್ರತಿ ಕುಟುಂಬಕ್ಕೆ ಈ ಕೆಳಕಂಡಂತೆ ಪೌಷ್ಠಿಕ ಆಹಾರ ಪದಾರ್ಥಗಳನ್ನು ಪಡಿತರ ಆಹಾರ ಧಾನ್ಯದ ಜೊತೆಗೆ ಹೆಚ್ಚುವರಿಯಾಗಿ ಉಚಿತವಾಗಿ ನೀಡಲಾಗುತ್ತಿದೆ. |

| ಕ್ರ.ಸಂ. | ಆಹಾರ ಪದಾರ್ಥ | ಪರಿಮಾಣ |
|---|---|---|
| 1 | ಅಕ್ಕಿ/ರಾಗಿ/ಗೋಧಿ | 8 ಕೆ.ಜಿ |
| 2 | ತೊಗರಿಬೇಳೆ | 3 ಕೆ.ಜಿ |
| 3 | ಕಡಲೆಬೀಜ | 1 ಕೆ.ಜಿ |
| 4 | ಹೆಸರುಕಾಳು/ಹುರಳಿಕಾಳು/ಅಲಸಂದೆ ಕಾಳು | 2 ಕೆ.ಜಿ |
| 5 | ಅಡುಗೆ ಎಣ್ಣೆ | 2 ಲೀಟರ್ |
| 6 | ಸಕ್ಕರೆ/ಬೆಲ್ಲ | 2 ಕೆ.ಜಿ., |
| 7 | ಮೊಟ್ಟೆ ತಿಂಗಳಿಗೆ | 30 |
| 8 | ನಂದಿನಿ ತುಪ್ಪ | ½ ಕೆ.ಜಿ |

**ಸಕಇ-ಎಸ್‌ಟಿಪಿ/98/2023**

**(ಬಿ.ನಾಗೇಂದ್ರ)**
ಪರಿಶಿಷ್ಟ ಪಂಗಡಗಳ ಕಲ್ಯಾಣ,
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.